


ಚಿತ್ರ: ಎ.ಎನ್. ಮುಕುಂದ

# ಗೋಪಾಲಕೃಷ್ಣ ಪೈ

ಕತೆಗಾರ, ಕಾದಂಬರಿಕಾರ, ಅನುವಾದಕ ಗೋಪಾಲಕೃಷ್ಣ ಪೈ, ಕಾಸರಗೋಡಿನ ಪೆರ್ಲದವರು. 1965ರಿಂದಲೇ ಸಣ್ಣಕತೆಗಳನ್ನು ಬರೆಯಲು ಶುರುಮಾಡಿದ ಅವರ ಮೊದಲ ಕಥಾ ಸಂಗ್ರಹ 'ತಿರುವು' ಪ್ರಕಟವಾಗಿದ್ದು 1985ರಲ್ಲಿ. ಬಳಿಕ 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ' ಎಂಬ ಕಥಾ ಸಂಗ್ರಹಗಳು ಪ್ರಕಟಗೊಂಡವು. ಈ ಮೂರೂ ಸಂಗ್ರಹಗಳು ಸೇರಿದಂತೆ 35 ಕತೆಗಳ ಸಂಗ್ರಹ 'ಮೂರು ಮತ್ತಿಷ್ಟು' 2010ರಲ್ಲಿ ಪ್ರಕಟವಾಗಿದೆ. ಅವರ ಮಹತ್ವದ ಕಾದಂಬರಿ 'ಸ್ವಪ್ನ ಸಾರಸ್ವತ'. 'ಆಧುನಿಕ ಚೀನಿ ಸಣ್ಣಕತೆಗಳು', 'ಚೆಕೋವನ ಕೊನೆಯ ದಿನಗಳು', 'ಮೋ ಯಾನ್‌ನ ಕಥೆಗಳು', 'ಮಹಾತ್ಮನಿಗಾಗಿ ಕಾಯುತ್ತ' ಅವರ ಅನುವಾದಿತ ಪುಸ್ತಕಗಳು. 'ಕನಸೆಂಬೋ ಕುದುರೆಯನೇರಿ' ಸಿನಿಮಾಕ್ಕೆ ಚಿತ್ರಕತೆ ಬರೆದಿರುವ ಅವರು ಅದರ ಅತ್ಯುತ್ತಮ ಚಿತ್ರಕತೆಗಾಗಿ ಈ ಸಿನಿಮಾದ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರೊಂದಿಗೆ ರಾಷ್ಟ್ರಪ್ರಶಸ್ತಿ ಪಡೆದುಕೊಂಡಿದ್ದಾರೆ. ಇತ್ತೀಚೆಗೆ ಅನನ್ಯ ಕಾಸರವಳ್ಳಿ ನಿರ್ದೇಶನದ 'ಹರಿ ಕಥಾ ಪ್ರಸಂಗ'ಕ್ಕೆ ಕತೆ, ಚಿತ್ರಕತೆ ಬರೆದಿದ್ದಾರೆ. ಈ ಕತೆ ಮೊದಲು 'ಬೇಲಾಡಿ ಹರಿಶ್ಚಂದ್ರ' ಎಂಬ ಹೆಸರಿನಲ್ಲಿ 'ಮಯೂರ'ದಲ್ಲಿ ಪ್ರಕಟವಾಗಿತ್ತು. ಪೈ, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಕೊನೆಯ ಪ್ರತಿಯಾಗುವಾಗ ಐದಾರು ಆವೃತ್ತಿಗಳಾಗುವುದೂ ಇದೆ. ನಂತರ ಅದನ್ನು ಪ್ರಕಟಣೆಗೆ ಕಳುಹಿಸುತ್ತೇನೆ. ಅದಾದ ಮೇಲೆಯೇ ನಾನು ನನ್ನ ಕೆಲವು ಆಪ್ತರಿಗೆ ತೋರಿಸುವುದಿದೆ. ಒಮ್ಮೆ ಪ್ರಕಟವಾಯಿತೋ ಆಪ್ತರು ವಿಮರ್ಶಕರು ಏನು ಹೇಳುತ್ತಾರೆ ಎಂಬ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ. ಪ್ರಸವಗೊಂಡ ಮಗು ಅಂಗವಿಕಲನಾಗಿರಲಿ, ಸುಂದರವಾಗಿರಲಿ, ತಾಯಿ ಅದನ್ನು ಹಾಗೆಯೇ ಸ್ವೀಕರಿಸುತ್ತಾಳೆ. ನನ್ನಿಂದ ಅದು ಹೊರಬಿದ್ದಿತಲ್ಲ ಅದೇ ಸಂತೃಪ್ತಿ.

ಒಂದು ಅನುಭವ ಪಡೆದಾಗ, ಅದು ತಕ್ಷಣಕ್ಕೆ ಕತೆಯನ್ನಾಗಿ ಮಾಡಬಹುದು ಎಂದು ನನಗನ್ನಿಸಿದ್ದು ಬಹಳ ಅಪರೂಪ. ಆ ಅನುಭವ ಆಗುತ್ತದೆ, ಒಂದಷ್ಟು ಹೊತ್ತು ಮನಸ್ಸಿನಲ್ಲುಳಿಯುತ್ತದೆ ಮತ್ತು ಮರೆಯಾಗುತ್ತದೆ. ಎಷ್ಟೋ ಸಮಯದ ನಂತರ ಅದನ್ನೊಂದು ಕತೆಯಾಗಿಸಬಹುದಲ್ಲ ಎಂದು ಅನ್ನಿಸಿದಾಗ, ಆಲಸ್ಯವನ್ನು ಝಾಡಿಸುವುದು ಸಾಧ್ಯವಾದರೆ ಬರೆಯುತ್ತೇನೆ. ಅಪ್ಪನೊಡನೆ ಜಗಳವಾಡಿದ ಹುಡುಗಿಯೊಬ್ಬಳನ್ನು ನಾನು ನೋಡಿದ್ದೆ. ವರ್ಷಗಳ ನಂತರ, ಅದನ್ನು ಕತೆಯಾಗಿಸುವಾಗ ಅವಳ ಸ್ವತಂತ್ರ ಮನಃಸ್ಥಿತಿಯನ್ನು ಊಹಿಸಿ ಕತೆ ಬರೆದೆ. ನಾನು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾಗ ಒಬ್ಬ ಹೆಣ್ಣುಮಗಳು ಉದ್ಯೋಗ ಅರಸಿಕೊಂಡು ಬಂದು ನನ್ನನ್ನು ವಿಚಾರಿಸಿದಳು. ಹ್ರಸ್ವವಾಗಿ ತನ್ನ ಒಂದಿಷ್ಟು